## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.337/2022

**PW**:1

**ದಿನಾಂಕ 03.03.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 1, 2 ಮತ್ತು 15 ನೇ ಪ್ರತಿವಾದಿಯರ ಪರ ಶ್ರೀ.ಎಸ್.ಕೆ.ಟಿ. ವಕೀಲರಿಂದ:**

ನನ್ನ ತಂದೆಯ ಹೆಸರು ಸಿದಗೊಂಡಪ್ಪ ಮೆಡೆಗಾರ. ನನ್ನ ತಾಯಿಯ ಹೆಸರು ಈರವ್ವ ಮೇಡೆಗಾರ. ನಾವು 5 ಜನ ಅಣ್ಣ ತಮ್ಮಂದಿರು. ನನಗೆ 3 ಜನ ಸಹೋದರಿಯರು. ನನಗೆ 16 ನೇ ಪ್ರತಿವಾದಿ ಮತ್ತು ಲಕ್ಷ್ಮೀಬಾಯಿ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ಲಕ್ಷ್ಮೀಬಾಯಿ ಇವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಲಕ್ಷ್ಮೀಬಾಯಿ ಇವರಿಗೆ ಮಕ್ಕಳು ಮತ್ತು ಗಂಡ ಇರುವುದಿಲ್ಲ. ಲಕ್ಷ್ಮೀಬಾಯಿ ಇವರ ಗಂಡನ ಹೆಸರು ಸಿದ್ರಾಮಪ್ಪ. ಸಿದ್ರಾಮಪ್ಪ ಇವರು ಜೀವಂತವಾಗಿ ಇದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಲಕ್ಷ್ಮೀಬಾಯಿ ಇವರ ಗಂಡ ಸಿದ್ರಾಮಪ್ಪ ಇವರು ಜೀವಂತವಾಗಿದ್ದು ಮತ್ತು ಅವರಿಗೆ ಮಕ್ಕಳು ಸಹ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಸಿದ್ರಾಮಪ್ಪ ಮತ್ತು ಲಕ್ಷ್ಮೀಬಾಯಿ ಇವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನಗೆ ಎಷ್ಟು ಪಾಲು ಬರುತ್ತದೆ ಅಷ್ಟು ಪಾಲು 1 ನೇ ಪ್ರತಿವಾದಿಗೂ ಬರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ ಮತ್ತು ಅವರ ಮಕ್ಕಳಿಗೂ ಸಹ ನನ್ನಷ್ಟೇ ಪಾಲು ಇರುತ್ತದೆ ಎಂದರೆ ಸರಿ. ನನ್ನ ಪಾಲಿಗೆ ಬರುವಂತಹ ಆಸ್ತಿಯನ್ನು ನನ್ನ ಹೆಂಡತಿ ಮತ್ತು ಮಗನಿಗೆ ನ್ಯಾಯಾಲಯದ ಡಿಕ್ರಿಯಲ್ಲಿ ಪಾಲು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಸಲು ದಾವಾ ನಂ.266/2006 ರಂತೆ ನನ್ನ ಹೆಂಡತಿ ಮತ್ತು ಮಕ್ಕಳ ವಿರುದ್ಧವಾಗಿ 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯ ಗಂಡ ಶ್ರೀಶೈಲ ಇವರು ದಾವೆ ಮಾಡಿದ್ದರು ಎಂದರೆ ಸರಿ. ಸದರಿ ದಾವೆಯು ಲೋಕ್ ಅದಾಲತನಲ್ಲಿ ರಾಜಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ನಂ.266/2006 ಇದು ಲೋಕ್ ಅದಾಲಾತನಲ್ಲಿ ರಾಜಿಯಾಗಿರುವ ಕಾರಣ ಪ್ರಸ್ತೂತ



ದಾವೆಯು ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ನಂ.266/2006 ರಲ್ಲಿ ಆದ ರಾಜಿಯ ವಿರುದ್ಧವಾಗಿ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿಲ್ಲ. ಅಸಲು ದಾವಾ ನಂ.266/2006 ರಲ್ಲಿ ಆದ ರಾಜಿಯು ನನಗೆ ಬಂಧನಕಾರಕ ಇರುವುದಿಲ್ಲ ಮತ್ತು

ಅದನ್ನು ರದ್ದುಪಡಿಸಲು ಕೋರಿ ನಾನು ಪ್ರಾರ್ಥನೆ ಮಾಡಿಕೊಂಡಿರುವ ಬಗ್ಗೆ ಮಾಹಿತಿ ಇಲ್ಲ. ದಿಃ14.02.2006 ರ ರಾಜಿಯಂತೆ ದಾವಾ ಆಸ್ತಿಗಳು ಪ್ರತಿವಾದಿಯರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ಪಾಲು ಬಂದಿಲ್ಲವೆಂದು ನುಡಿಯುತ್ತಾರೆ. ರಾಜಿಯಲ್ಲಿ ನನ್ನ ಹೆಂಡತಿ ಮತ್ತು ಮಗನಿಗೆ ಬಂದ ಆಸ್ತಿಯಲ್ಲಿ ಹಕ್ಕು ಇರುತ್ತದೆಯೇ ಹೊರತು 1 ಮತ್ತು 2 ನೇ ಪ್ರತಿವಾದಿಯರಿಗೆ ಬಂದ ಆಸ್ತಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 1, 2 ಮತ್ತು 15 ನೇ ಪ್ರತಿವಾದಿಯರು 2006 ರಲ್ಲಿ ಆದ ರಾಜಿ ಡಿಕ್ರಿಯಂತೆ ತಮಗೆ ಬಂದ ಹಿಸ್ಸೆಯಲ್ಲಿ ಪ್ರತ್ಯೇಕ್ಷ ಕಬ್ಜಾ ವಹಿವಾಟನ್ನು ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿಯು ನನಗೆ ಆಸ್ತಿಯನ್ನು ಕೊಟ್ಟಿಲ್ಲವೆಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ರಾಜಿ ಡಿಕ್ರಿಯಂತೆ ಅವರ ಪಾಲಿಗೆ ಬಂದ ಆಸ್ತಿಯನ್ನು ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ಸದರಿ 1 ಮತ್ತು 2 ನೇ ಪ್ರತಿವಾದಿಯರಿಗೆ ಬಂದ ಆಸ್ತಿಗೆ ಅವರೇ ಮಾಲೀಕರು ಮತ್ತು ಸ್ವಾಧಿನದಾರರು ಇದ್ದು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪಾಲಿಗೆ ಬರುತ್ತಿದ್ದ ಆಸ್ತಿಯನ್ನು 16 ನೇ ಪ್ರತಿವಾದಿಗೆ ರಾಜಿ ಡಿಕ್ರಿಯಲ್ಲಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ತಮಗೆ ಬಂದ ಹಿಸ್ಸೆಯಲ್ಲಿ ಸಾಕಷ್ಟು ಸುಧಾರಣೆ ಮಾಡಿಕೊಂಡು ದ್ರಾಕ್ಷಿ ಮತ್ತು ದಾಳಿಂಬೆ ಬೆಳೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಈಗ ಹುಬ್ಬಳ್ಳಿಯಲ್ಲಿ ಇರುತ್ತೇನೆ. ನಾನು ಈಗ್ಗೆ 45 ವರ್ಷಗಳಿಂದ ಹುಬ್ಬಳ್ಳಿಯಲ್ಲಿ ಇರುತ್ತೇನೆ. ನಾನು ಸುಮಾರು 45 ವರ್ಷಗಳಿಂದ ಹುಬ್ಬಳ್ಳಿಯಲ್ಲಿ ವಾಸವಿರುವುದರಿಂದ ನನಗೆ ದಾವಾ ಆಸ್ತಿಗಳಲ್ಲಿ ದ್ರಾಕ್ಷಿ ಮತ್ತು ದಾಳಿಂಬೆ ಬೆಳೆದಿರುವ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ತಮ್ಮ ಪಾಲಿಗೆ ಬಂದ ಆಸ್ತಿಯಲ್ಲಿ ಕೊಳವೆ ಬಾವಿ, ಬೋರು ಹಾಗೂ ನೀರಿನ ಹೊಂಡವನ್ನು ಹೊಡೆಸಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ತಮ್ಮ ಪಾಲಿಗೆ ಬಂದ ಆಸ್ತಿಯಿಂದ ಕೆನರಾ ಬ್ಯಾಂಕ್ ಹೊರ್ತಿ ಹಾಗೂ PKPS ಯಿಂದ ಸಾಲವನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಸಾಕಷ್ಟು ಸುಧಾರಣೆ ಮಾಡಿರುವ ಕಾರಣ ಅದನ್ನು ಕಬಳಿಸಬೇಕೆನ್ನುವ ದುರುದ್ದೇಶದಿಂದ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪ್ರತಿವಾದಿಯರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.